ಬೋದಿಲೇರನನ್ನು ಬಂದು ನನ್ನನ್ನು ಕಾಣೊದಕ್ಕೆ ಹೇಳು' ಎಂದು ನುಡಿದ ಮೇಷ್ಟ್ರು ತರಗತಿಯಿಂದ ಹೊರಹೋಗುತ್ತಿರುವಾಗ ಅವರ ನಡಿಗೆಯಲ್ಲಿ ಒಂದುರೀತಿಯ ಎಂದೂ ಇಲ್ಲದ ಲವಲವಿಕೆ ಇತ್ತು. ಮಕ್ಕಳಿಗೂ ಇಂದು ಮೇಷ್ಟ್ರು ಎಂದಿಗಿಂತ ಹೆಚ್ಚು ಖುಷಿಯಾಗಿದ್ದಾರೆ ಅನಿಸಿತು.

★★★

ದೊಡ್ಡವೀರಯ್ಯ ಕಾಡಬಸಯ್ಯ ಚಿಕ್ಕೋಡಿಮಠ್ ಹೆಸರು ಉದ್ದವೂ ಮತ್ತು ಹಳೆಯದೆಂದು ಕಾಲೇಜಿನಲ್ಲಿರುವಾಗಲೇ ದೊಡ್ಡವೀರಯ್ಯ ತನ್ನ ಹೆಸರನ್ನು 'ದೊಕಾಚಿ' ಎಂದು ಮೂರಕ್ಷರಕ್ಕಿಳಿಸಿ ಮೊಟಕುಗೊಳಿಸಿಕೊಂಡು ಜನ್ಮಕ್ಕೆ ಕಾರಣನಾದ ಅಪ್ಪನಿಗೆ ಏಕಕಾಲಕ್ಕೆ ಸಮಸ್ಯೆಯಾಗಿಯೂ ಮತ್ತು ಒಗಟಾಗಿಯೂ ಕಂಡಿದ್ದ. ಒಮ್ಮೊಮ್ಮೆ ಈ ಹೆಸರು ಮನುಷ್ಯನದೋ ಪ್ರಾಣಿಯದೋ ಎಂದು ಗಲಿಬಿಲಿಗೊಳ್ಳುತ್ತಿದ್ದ ಕಾಡಬಸಯ್ಯ ಅಷ್ಟೊಂದು ಓದಿರುವ ತನ್ನ ಮಗ ಯಾವುದೋ ಹೋರಾಟಗಾರರದೋ ಇಲ್ಲ ಸಮಾಜ ಸುಧಾರಕರದೋ ಹೆಸರಿಟ್ಟುಕೊಂಡಿರಬಹುದೆಂದು ಸಮಾಧಾನಪಟ್ಟುಕೊಳ್ಳುತ್ತಿದ್ದ. ಕಾಡಬಸಯ್ಯನ ಆರು ಗಂಡುಮಕ್ಕಳು ಮತ್ತು ನಾಲ್ಕು ಹೆಣ್ಣು ಸಂತಾನಗಳಲ್ಲಿ ದೊಡ್ಡವೀರಯ್ಯನೇ ಕೊನೆಯವನು. ಕಾಡಬಸಯ್ಯನ ಮಕ್ಕಳಲ್ಲಿ ಮಾತ್ರವಲ್ಲದೆ ಆ ಚಿಕ್ಕೋಡಿಮಠ್ ಮನೆತನದಲ್ಲಿ ಕಾಲೇಜು ಮೆಟ್ಟಿಲು ಹತ್ತಿದ್ದು ದೊಡ್ಡವೀರಯ್ಯ ಒಬ್ಬನೇ ಎನ್ನುವುದು ಆ ಇಡೀ ಮನೆತನಕ್ಕೆ ಗೌರವದ ಮತ್ತು ಅಭಿಮಾನದ ವಿಷಯವಾಗಿತ್ತು. ಕಲಬುರಗಿಯ ಎಸ್.ಬಿ. ಕಾಲೇಜಿನಲ್ಲಿ ಡಿಗ್ರಿ ಪೂರೈಸಿ, ಪ್ರಾಥಮಿಕ ಶಾಲೆಯ ಹುಡುಗರಿಗೆ ಪಾಠ ಹೇಳುವ ಉದ್ದೇಶದಿಂದ ಟಿಸಿಎಚ್ ಮುಗಿಸಿ, ಜ್ಞಾನಗಂಗಾದಲ್ಲಿ ಕನ್ನಡ ಎಂ.ಎ.ಗೆ ಸೇರಿ ಭಾರತೀಯ ಸಾಹಿತ್ಯದೊಂದಿಗೆ ಪಾಶ್ಚಿಮಾತ್ಯ ಸಾಹಿತ್ಯವನ್ನೂ ಓದಿಕೊಂಡು ಈ ನಡುವೆ ಕ್ರಾಂತಿಯ ಸೆಳೆತದಿಂದ ಪಿಎಚ್.ಡಿ. ಅರ್ಧಕ್ಕೆ ಬಿಟ್ಟು ಊರಿಗೆ ಬಂದು ಕೂತಿದ್ದ ದೊಕಾಚಿ ಅಪ್ಪ ಕಾಡಬಸಯ್ಯನಿಗೆ ದೊಡ್ಡ ತಲೆನೋವಾಗಿದ್ದ. ಕ್ರಾಂತಿಯ ಮಾತುಗಳನ್ನಾಡುತ್ತ ತಲೆತಲಾಂತರದಿಂದ ಊರಿನಲ್ಲಿ ರೂಢಿಗತವಾಗಿದ್ದ ಸಂಪ್ರದಾಯಗಳ ವಿರುದ್ಧ ಭಾಷಣ ಬಿಗಿಯುತ್ತ ಅಪ್ಪ ಕಾಡಬಸಯ್ಯನಿಗೊಂದು ಗಂಭೀರ ಸಮಸ್ಯೆಯಾಗಿ ಕಾಡತೊಡಗಿದ. ಈ ಸಂದರ್ಭದಲ್ಲೇ ಅವನ ಸಮಸ್ಯೆಯನ್ನು ಪರಿಹರಿಸಲೆಂಬಂತೆ ಮಠದ ಅನುದಾನಿತ ಪ್ರೈಮರಿ ಶಾಲೆಯಲ್ಲಿ ಖಾಲಿಯಿದ್ದ ಶಿಕ್ಷಕ ಹುದ್ದೆ ತುಂಬಲು ಪತ್ರಿಕೆಯಲ್ಲಿ ಜಾಹೀರಾತು ಪ್ರಕಟವಾಗಿದ್ದೆ ತಡ ಕಾಡಬಸಯ್ಯ ಮಠದ ಅಪಗೊಳ ಕಾಲಿಗೆ ಬಿದ್ದು ಆ ಕೆಲಸ ಮಗನಿಗೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದ. ದೊಡ್ಡವೀರಯ್ಯನ ಟಿಸಿಎಚ್ ಇಲ್ಲಿ ಉಪಯೋಗಕ್ಕೆ ಬಂದಿತ್ತು. ಮಠಕ್ಕೆ ಕಾಡಬಸಯ್ಯ ಕಾಲಕಾಲಕ್ಕೆ ನೀಡುತ್ತ ಬಂದ ದೇಣಿಗೆ ಮತ್ತು ಮಠದ ಮೇಲೆ ಅವನಿಗಿರುವ ಭಕ್ತಿ ಶ್ರದ್ಧೆಯಿಂದ ಅಪಗೊಳು ಸಹಜವಾಗಿಯೇ ಅವನ ಬೇಡಿಕೆಗೆ ತಥಾಸ್ತು ಎಂದಿದ್ದರು. ಅಂತೂ ತಾನು ಓದಿದ ಮಠದ ಶಾಲೆಯಲ್ಲೇ ತನಗೆ ಪಾಠ ಮಾಡುವ ಕೆಲಸ ಸಿಕ್ಕಿರುವುದು ಯೋಗಾಯೋಗವೆಂದೇ ಬಗೆದ ದೊಕಾಚಿ ಮೇಷ್ಟ್ರಿಗೆ ಇಡೀ ಊರಿನಲ್ಲಿ ಒಂದು ದೊಡ್ಡ ವೈಚಾರಿಕ ಕ್ರಾಂತಿಗೆ ತಾನು ಕಾರಣನಾಗಬೇಕೆಂಬ ಭಾವನೆ ಮನಸ್ಸಿನ ಒಂದು ಮೂಲೆಯಲ್ಲಿ ಮೊಳಕೆಯೊಡೆಯತೊಡಗಿತು.

★★★

'ಮೇಷ್ಟ್ರೆ ಬಂದು ಕಾಣಿ ಅಂತ ಹೇಳಿದ್ರಂತೆ' ದೊಕಾಚಿ ಮೇಷ್ಟ್ರು ತರಗತಿಯಲ್ಲಿ ಮಕ್ಕಳಿಗೆ ಬೇಂದ್ರೆ ಅವರ 'ಹಕ್ಕಿ ಹಾರುತಿದೆ' ಕವಿತೆಯ ಸಾಲುಗಳನ್ನು ವಿವರಿಸಿ ಹೇಳುತ್ತ ತನ್ಮಯರಾಗಿರುವ ಹೊತ್ತಿಗೆ ಅಪಶ್ರುತಿಯೊಂದು ಮಿಡಿದಂತಾಗಿ ಧ್ವನಿ ಬಂದ ದಿಕ್ಕಿನತ್ತ ದೃಷ್ಟಿ ಹರಿಸಿದವರಿಗೆ ಬಾಗಿಲಲ್ಲಿ ತನ್ನ ಭೀಮಕಾಯವನ್ನು ಸಂಕೋಚದಿಂದ ಹಿಡಿಯಾಗಿಸಿಕೊಂಡು ನಿಂತಿದ್ದ ಮನುಷ್ಯಾಕೃತಿಯೊಂದು ಕಣ್ಣಿಗೆ ಬಿತ್ತು. ಹುಬ್ಬುಗಳನ್ನು ಮೇಲೇರಿಸಿ ಮುಖದಲ್ಲಿ ಪ್ರಶ್ನಾರ್ಥಕ ಚಿಹ್ನೆ ಮೂಡಿಸಿಕೊಂಡ ಮೇಷ್ಟ್ರನ್ನು